ಬೆವಿಕಂ

BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-6, ಸಂಚಿಕೆ-2 ತ್ರೈಮಾಸಿಕ, ಏಪ್ರಿಲ್ - ಜೂನ್ 2019 ಪುಟಗಳು-12



## ಸಾಧಕರು ಇವರು




## ನಮ್ಮ ಊರು, ನಮ್ಮ ಜಿಲ್ಲೆ

## ಚಾಮರಾಜನಗರ



## ಇವರು ನಮ್ಮ ಸಾಹಿತಿಗಳು





**ದಿನಾಂಕ 26.01.2019 ರಂದು ಬೆವಿಕಂ ನ ನಿಗಮ ಕಛೇರಿಯಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.**
**ಅದೇ ಸಂದರ್ಭದಲ್ಲಿ ಗಜ ಚಂಡಮಾರುತದ ಪರಿಣಾಮ ತಮಿಳುನಾಡು ರಾಜ್ಯದಲ್ಲಿ ಹಾನಿಗೊಳಗಾದ ವಿದ್ಯುತ್ ಜಾಲವನ್ನು ಪುನರ್ ಸ್ಥಾಪಿಸಲು ಶ್ರಮಿಸಿದ ತಂಡದ ಎಲ್ಲಾ ಸದಸ್ಯರಿಗೂ ಹಾಗೂ ವಿದ್ಯುತ್ ಸುರಕ್ಷತೆಯ ಸಾಮಗ್ರಿಗಳನ್ನು ಉಪಯೋಗಿಸಿ, ಸುರಕ್ಷತಾ ಕ್ರಮವನ್ನು ಅನುಸರಿಸಿ ಕಾರ್ಯನಿರ್ವಹಿಸಿರುವ ಸಿಬ್ಬಂದಿ ವರ್ಗಕ್ಕೆ ಪ್ರಶಂಸಾ ಪತ್ರವನ್ನು ವಿತರಿಸಿ ಅಭಿನಂದಿಸಲಾಯಿತು.**












# Message from Managing Director



I would like to convey my regards towards bringing out "BESCOM SNEHI" magazine by BESCOM, which highlights the on-going works of the department and it is also a good platform to bring out writing skills and talents of BESCOM employees.

This year BESCOM has planned to start the conversion of OH line into UG cable of BMAZ area in phased manner over a period of 3 years. Along with this BESCOM is planning to lay its own OFC cable for creating a communication network which will help expansion of Smart Meter and Smart distribution grid.

Starting this Financial Year, I urge all the field officers to concentrate more on loss reduction in feeders by making suitable CAPEX and local planning works.

BESCOM has finalised the tender of installing 112 EV vehicle charging stations at various government offices, which will be completed by the month of May or June 2019, which will help the EV vehicle users to charge their vehicles at convenient locations.

I would like to wish everyone a happy May Day .

**C. Shikha**
Managing Director
BESCOM

# ಸಂಪಾದಕೀಯ

ಆತ್ಮೀಯರೆ,

ಹೊಸ ಸಂವತ್ಸರದ ಆರಂಭದ ಹಬ್ಬವಾದ ಯುಗಾದಿಯನ್ನು ಏಪ್ರಿಲ್ ಮೊದಲವಾರ ತಾವೆಲ್ಲರೂ ಸಂಭ್ರಮ ಸಡಗರದಿಂದ ಆಚರಿಸುತ್ತೀರೆಂದು ಭಾವಿಸಿದ್ದೇನೆ. ಚಾಂದ್ರಮಾನ ಕ್ಯಾಲೆಂಡರ್ ಪ್ರಕಾರ ಚೈತ್ರಮಾಸದ ಆರಂಭದ ದಿನವೇ ಯುಗಾದಿ. ಈ ಸಂದರ್ಭದಲ್ಲಿಯೇ ನಾವು ಪ್ರಕೃತಿಯಲ್ಲಿ ಹಲವು ಬದಲಾವಣೆಗಳನ್ನು ಕಾಣುತ್ತೇವೆ.

ಮರ ಗಿಡಗಳಲ್ಲಿ ಬಣ್ಣ ಬಣ್ಣದ ಹೂವುಗಳು ಅರಳುವುದು, ಇನ್ನು ಕೆಲವೆಡೆ ಹಣ್ಣೆಲೆಗಳು ಉದುರಿ ಚಿಗುರು ಕಾಣುವುದು. ಆಗಾಗ್ಗೆ ಬೀಳುವ ಬೇಸಿಗೆ ಮಳೆ ನಿಸರ್ಗದಲ್ಲಿ ಕೇಳಿ ಬರುವ ಕೋಗಿಲೆಯ ಹಾಡು ಇತ್ಯಾದಿ.

ಚೈತ್ರಮಾಸದಲ್ಲಿ ಕಂಡು ಬರುವ ಬದಲಾವಣೆಗಳು ಜನಮಾನಸದಲ್ಲಿ ವಿಶೇಷವಾದ ಉತ್ಸಾಹಕ್ಕೆ ಕಾರಣವಾಗುವುದನ್ನು ನಾವು ನೋಡುತ್ತೇವೆ.

ಅದೇ ರೀತಿ ಬೇಸಿಗೆ ಕಾಲ ಎಂದರೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಒಂದು ಸವಾಲಿನ ಸಮಯ. ಕಾರಣ ವಿದ್ಯುತ್ ಗ್ರಾಹಕರ ಬೇಡಿಕೆಯೂ ಜಾಸ್ತಿ ಇರುತ್ತದೆ.

ಕಚೇರಿ, ಮನೆಗಳಲ್ಲಿ ಸದಾಕಾಲ ತಿರುಗುವ ಫ್ಯಾನ್‌ಗಳು, ಹವಾನಿಯಂತ್ರಿತ ವ್ಯವಸ್ಥೆ, ರೆಫ್ರಿಜರೇಟರುಗಳು, ಇತ್ಯಾದಿ ಆಧುನಿಕ ಪರಿಕರಗಳಿಗೆಲ್ಲ ವಿದ್ಯುತ್ ಬೇಕೇ ಬೇಕು. ಹಾಗಾಗಿ ವಿದ್ಯುತ್ ಇಲ್ಲದೆ ನಿತ್ಯ ಜೀವನವೇ ಅಸಾಧ್ಯ ಎಂಬ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಏಪ್ರಿಲ್, ಮೇ ತಿಂಗಳುಗಳಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯ. ರೈತರು ಕೂಡ ಕೃಷಿ ಪಂಪ್‌ಸೆಟ್‌ಗಳಿಂದ ಬೆಳೆಗಳಿಗೆ ಹಾಗೂ ತೋಟಗಳಿಗೆ ನೀರು ಹಾಯಿಸಲು ತವಕಪಡುವಂತಹ ಕಾಲ. ಇಂತಹ ಸಂದರ್ಭ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾದರೆ ಎಲ್ಲೆಡೆ ಅಸಮಧಾನಕ್ಕೆ ಕಾರಣವಾಗುವುದು ಸಹಜ. ಬೇಸಿಗೆಯಲ್ಲಿ ಸಾಮಾನ್ಯವಾಗಿ ಜಲವಿದ್ಯುತ್ ಯೋಜನೆಗಳಲ್ಲಿ ನೀರಿನ ಕೊರತೆ ಉಂಟಾದರೆ ವಿದ್ಯುತ್ ಉತ್ಪಾದನೆ ಕೂಡ ಕಡಿಮೆಯಾಗುತ್ತದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಲಭ್ಯವಿರುವ ವಿದ್ಯುತ್ ಅನ್ನು ಗ್ರಾಹಕರಿಗೆ ಸಮರ್ಪಕವಾಗಿ ಸರಬರಾಜು ಮಾಡುವ ಜವಾಬ್ದಾರಿ ನಮ್ಮ ಮೇಲೆ ಇದೆ ಎಂಬುದನ್ನು ನಾವೆಲ್ಲರೂ ಅರಿತಿದ್ದೇವೆ.

"ಬೆಸ್ಕಾಂ" ನೌಕರರು ಹಾಗೂ ಅಧಿಕಾರ ವರ್ಗ ಬೇಸಿಗೆ ಕಾಲವನ್ನು ಸವಾಲಾಗಿ ಸ್ವೀಕರಿಸಿ ಕಾರ್ಯೋನ್ಮುಖರಾಗುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ತಮ್ಮೆಲ್ಲರ ಸಹಕಾರವನ್ನು ನಾನು ಕೋರುತ್ತೇನೆ.

ಏಪ್ರಿಲ್ ಒಂದರಿಂದ ಹೊಸ ಆರ್ಥಿಕ ವರ್ಷಕೂಡ ಆರಂಭವಾಗುತ್ತದೆ. ಸರ್ಕಾರ ಬಜೆಟ್‌ನಲ್ಲಿ ಪ್ರಕಟಿಸಿದ ಇಂಧನ ಇಲಾಖೆ ಕಾರ್ಯಕ್ರಮಗಳು ಕೂಡ ವ್ಯವಸ್ಥಿತವಾಗಿ ಜಾರಿಗೆ ಬರಬೇಕಿದೆ. ಈ ದಿಸೆಯಲ್ಲಿಯೂ ನಮ್ಮ ಜವಾಬ್ದಾರಿ ಇದೆ ಎಂಬುದನ್ನು ಮರೆಯುವಂತಿಲ್ಲ.

"ಬೆಸ್ಕಾಂ ಸ್ನೇಹಿ" ನಿಮ್ಮದೇ ಗೃಹ ಪತ್ರಿಕೆ ಅದನ್ನು ಪ್ರೋತ್ಸಾಹಿಸಿ ಬೆಳೆಸುವ ಜವಾಬ್ದಾರಿ ನಿಮ್ಮದು. ಕತೆ, ಕವನ ಹಾಗೂ ಇತರ ವಿಚಾರಗಳಿಗೆ ಸಂಬಂಧಿಸಿದ ಲೇಖನಗಳನ್ನು ಹಂಚಿಕೊಳ್ಳಲು ಕೋರಿದೆ. ನಿಮ್ಮ ಸಲಹೆ–ಸೂಚನೆಗಳಿಗೆ ಸದಾ ಸ್ವಾಗತ.

ತಮಗೆಲ್ಲರಿಗೂ ಕಾರ್ಮಿಕ ದಿನಾಚರಣೆಯ ಶುಭಾಶಯಗಳು.

ವಂದನೆಗಳೊಂದಿಗೆ.

ಸಂಪಾದಕರು
**ಹೆಚ್.ಎಂ. ಶಿವಪ್ರಕಾಶ್**
ಪ್ರಧಾನ ವ್ಯವಸ್ಥಾಪಕರು(ಗ್ರಾ. ಸಂ), ಬೆಸ್ಕಾಂ

# ನಮ್ಮ ಊರು, ನಮ್ಮ ಜಿಲ್ಲೆ – ಚಾಮರಾಜನಗರ

ಮೈಸೂರು ಜಿಲ್ಲೆಯ ಭಾಗವಾಗಿದ್ದ ಚಾಮರಾಜನಗರವನ್ನು 1997ರಲ್ಲಿ ಪ್ರತ್ಯೇಕ ಜಿಲ್ಲೆಯನ್ನಾಗಿ ರಚಿಸಲಾಯಿತು.

ಬೆಟ್ಟಗುಡ್ಡಗಳಿಗೆ ಹಾಗೂ ವನ್ಯಧಾಮಗಳಿಗೆ ಹೆಸರಾದ ಈ ಜಿಲ್ಲೆ ಹಲವು ಆದಿವಾಸಿಗಳು ಹಾಗೂ ಪ್ರವಾಸಿ ತಾಣಗಳನ್ನು ತನ್ನ ಒಡಲಲ್ಲಿ ಇಟ್ಟು ಕೊಂಡಿದೆ.


ಸೋಲಿಗರು, ಕಾಡುಕುರುಬರು, ಜೇನುಕುರುಬರು ಸೇರಿದಂತೆ ಹಲವು ಆದಿವಾಸಿಗಳು ಇಲ್ಲಿ ನೆಲೆಸಿದ್ದಾರೆ. ಅವರಿಂದಾಗಿ ವಿವಿಧ ಜಾನಪದ ಕಲೆಗಳಿಗೂ ಹೆಸರಾಗಿದೆ. ವಿಭಜನೆ ಮಾಡುವಾಗ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ಹಾಗೂ ಗುಂಡ್ಲುಪೇಟೆ ತಾಲ್ಲೂಕುಗಳಿಂದ ಕೂಡಿದ್ದ ಈ ಜಿಲ್ಲೆ ಈಗ ಹೊಸದಾಗಿ ಹನೂರು ಸೇರಿ ಐದು ತಾಲ್ಲೂಕುಗಳನ್ನು ಹೊಂದಿದೆ.

ಮೈಸೂರಿನಿಂದ ಸುಮಾರು 60 ಕಿ.ಮೀ ದೂರದಲ್ಲಿರುವ ಈ ಜಿಲ್ಲಾ ಕೇಂದ್ರ ಸುಮಾರು 11 ಲಕ್ಷ ಜನಸಂಖ್ಯೆಯನ್ನು ಹೊಂದಿದೆ.

ನಾಲ್ಕು ವನ್ಯಧಾಮಗಳಲ್ಲಿ ಬಂಡಿಪುರ ಮತ್ತು ಬಿಳಿಗಿರಿರಂಗನ ಬೆಟ್ಟ ಪ್ರದೇಶಗಳು ಹುಲಿ ಸಂರಕ್ಷಣೆಗೆ ಮೀಸಲಾಗಿವೆ. ಮಲೆ ಮಹದೇಶ್ವರ ಮತ್ತು ಕಾವೇರಿ ವನ್ಯಧಾಮಗಳು ದಟ್ಟವಾದ ಅರಣ್ಯ ಮತ್ತು ಹಲವು ವನ್ಯಜೀವಿಗಳ ಆವಾಸಸ್ಥಾನಗಳಾಗಿವೆ.

ಭತ್ತ, ರಾಗಿ, ತೆಂಗು, ಸೂರ್ಯಕಾಂತಿ, ಒಣಮೆಣಸು, ನೀರುಳ್ಳಿ, ಅವರೆ ಇತ್ಯಾದಿಗಳು ಜಿಲ್ಲೆಯ ಪ್ರಮುಖ ಬೆಳೆಗಳು.

ಬಿಳಿಗಿರಿರಂಗನ ಬೆಟ್ಟ, ಮಲೆಮಹದೇಶ್ವರ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ ಹಾಗೂ ಬಂಡಿಪುರ ರಾಷ್ಟ್ರೀಯ ಉದ್ಯಾನ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಾಗಿವೆ.






**ಬಿ.ಆರ್.ಹಿಲ್ಸ್:** ಬಿಳಿಕಲ್ಲಿನ ಬೆಟ್ಟ ಅಥವಾ ಬಿಳಿಗಿರಿರಂಗನ ಬೆಟ್ಟ ಚಾಮರಾಜನಗರಕ್ಕೆ ಸಮೀಪದಲ್ಲಿದೆ. ಸಮುದ್ರ ಮಟ್ಟದಿಂದ ಸುಮಾರು 1700 ಮೀಟರು ಎತ್ತರದಲ್ಲಿರುವ ಹೆಸರಾಂತ ಧಾರ್ಮಿಕ ಕ್ಷೇತ್ರ.

ಶ್ವೇತಾದ್ರಿ ಪರ್ವತ ಎಂದು ಪುರಾಣ ಕಾಲದಿಂದ ಕರೆಯಲ್ಪಡುವ ಈ ಬೆಟ್ಟದ ಮೇಲಿನ ರಂಗನಾಥಸ್ವಾಮಿಯ ದರ್ಶನಕ್ಕಾಗಿ ಅನೇಕ ಭಕ್ತರು ಇಲ್ಲಿಗೆ ಬರುತ್ತಾರೆ.



**ಬಂಡಿಪುರ ರಾಷ್ಟ್ರೀಯ ಉದ್ಯಾನ:** ಮೈಸೂರು – ಉದಕಮಂಡಲ (ಊಟಿ) ಹೆದ್ದಾರಿಯಲ್ಲಿರುವ ಬಂಡಿಪುರ ರಾಷ್ಟ್ರೀಯ ಉದ್ಯಾನವು ಭಾರತದಲ್ಲಿರುವ ಅನೇಕ ಉದ್ಯಾನಗಳಲ್ಲಿ ಪ್ರಖ್ಯಾತವಾದುದು.

ಇದು ತಮಿಳುನಾಡು ಮತ್ತು ಕೇರಳದ ಅರಣ್ಯ ಶ್ರೇಣಿಯನ್ನು ಆವರಿಸಿಕೊಂಡಿದೆ. ವಿವಿಧ ಭೌಗೋಳಿಕ ಗುಣಗಳನ್ನುಳ್ಳ ಈ ಉದ್ಯಾನವು ಅಪಾರ ಸಸ್ಯ ಸಂಪತ್ತು, ಪ್ರಾಣಿ ಮತ್ತು ಪಕ್ಷಿ ಸಂಕುಲವನ್ನು ಒಳಗೊಂಡು ಜೀವ ವೈವಿಧ್ಯದ ಸ್ವರ್ಗ ಎಂದೇ ಖ್ಯಾತವಾಗಿದೆ.

ನಿತ್ಯ ಹರಿದ್ವರ್ಣದ ಉದುರೆಲೆಯ ಕಾಡು, ಕುರುಚಲು ಪೊದೆಯ ಕಾನನ ಎಂದು ಕರೆಸಿಕೊಳ್ಳುವ ಬಂಡಿಪುರ ಪ್ರವಾಸಿಗರಿಗೆ ಬಹಳ ಆಕರ್ಷಕ



ಪ್ರದೇಶವಾಗಿದೆ. ಸಾವಿರಾರು ಆನೆಗಳು ವಾಸಿಸುವ ಈ ಕಾಡಿನಲ್ಲಿ ಹುಲಿ, ಚಿರತೆಗಳು, ಹಿಂಡಿನಲ್ಲಿ ತಿರುಗಾಡುವ ಕಡವೆ, ಜಿಂಕೆ, ಕಾಡೆಮ್ಮೆಗಳು ಕಾಣಬರುತ್ತವೆ.

ಅಪರೂಪವಾಗಿ ಕರಡಿ, ಕತ್ತೆ, ಕಿರುಬ, ಮುಂಗುಸಿ, ಕಾಡುಪಾಪ, ಸರೀಸೃಪಗಳು ಕಾಣುತ್ತವೆ. ಬಂಡಿಪುರದ ವಾಯುವ್ಯಕ್ಕೆ ನಾಗರಹೊಳೆ, ದಕ್ಷಿಣಕ್ಕೆ ತಮಿಳುನಾಡಿನ ಮಧುಮಲೈ ಮತ್ತು ನೈರುತ್ಯಕ್ಕೆ ಕೇರಳದ ವಯನಾಡು ಅರಣ್ಯ ಉದ್ಯಾನಗಳಿವೆ.

**ಮಲೆ ಮಹದೇಶ್ವರಸ್ವಾಮಿ ಬೆಟ್ಟ:** ಇದು ಕೂಡ ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ. ಚಾರಣಕ್ಕೆ ಹೇಳಿ ಮಾಡಿಸಿದ ತಾಣ. ಹುಲಿಯನ್ನು ವಾಹನವನ್ನಾಗಿಸಿಕೊಂಡ ಮಹದೇಶ್ವರ ಅಪ್ಪಟ ಜನಪದ ದೈವ. ಸಾಕ್ಷಾತ್ ಪರಶಿವನೇ ಮಾದೇಶ್ವರನ ರೂಪವನ್ನು ತಾಳಿ ಇಲ್ಲಿ ನೆಲೆಸಿದ್ದಾನೆಂದು ಭಕ್ತರು ನಂಬುತ್ತಾರೆ.

ಇದು ಆಸ್ತಿಕರಿಗಷ್ಟೇ ಅಲ್ಲ ನಿಸರ್ಗ ಪ್ರಿಯರಿಗೂ ಸುಂದರ ತಾಣವೆನಿಸಿದೆ. ಶಿವರಾತ್ರಿ ಮತ್ತು ದೀಪಾವಳಿ ದಿನಗಳಲ್ಲಿ ಇಲ್ಲಿ ವಿಶೇಷ ಉತ್ಸವಗಳು ನಡೆಯುತ್ತವೆ.

**ಹಿಮವದ್ ಗೋಪಾಲಸ್ವಾಮಿ ಬೆಟ್ಟ :** ಗುಂಡ್ಲುಪೇಟೆಯ ಸಮೀಪದಲ್ಲಿರುವ ಹಿಮವದ್ ಗೋಪಾಲಸ್ವಾಮಿ ಬೆಟ್ಟವು ಒಂದು ಅಚ್ಚರಿಯ ತಾಣವೆನ್ನಬಹುದು. ಯಾತ್ರಾರ್ಥಿಗಳು ಬರುವ ಈ ನಿರ್ಜನ ತಾಣದ ಬೆಟ್ಟವನ್ನು ಪುರಾಣಗಳಲ್ಲಿ ಕಮಾಚಲ, ಸ್ಕಂದಗಿರಿ ಎಂಬ ಹೆಸರುಗಳಿಂದಲೂ ಕರೆಯಲಾಗಿದೆ.

ಬಹಳ ಕಡಿದಾದ ಹಾದಿಯಾಗಿದ್ದ ಈ ಬೆಟ್ಟಕ್ಕೆ ಹೋಗಲು ಅನುಕೂಲವಾದ ರಸ್ತೆಯನ್ನು ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ನಿರ್ಮಿಸಲಾಯಿತು.

ಬೆಟ್ಟದ ಮೇಲೆ ಪ್ರಾಚೀನ ದೇವಾಲಯವಿದೆ, ಗರ್ಭಗುಡಿಯಲ್ಲಿರುವ ಗೋಪಾಲಸ್ವಾಮಿಯು ಹಿಮದ ಮಣಿಮಾಲೆಗಳಿಂದ ಅಲಂಕೃತನಾಗಿ ಕೊಳಲನ್ನು ಹಿಡಿದು ನಿಂತಿರುವ ವಿಗ್ರಹವು ಮೋಹಕವಾಗಿದೆ.

ಇಲ್ಲಿ ಸದಾ ಮಂಜು ಮುಸುಕಿದ ವಾತಾವರಣವಿದ್ದು ಗರ್ಭಗುಡಿಯ ಬಾಗಿಲು ಕೂಡಾ ಮಂಜುಹನಿಗಳಿಂದ ಕೂಡಿರುತ್ತದೆ, ಹಾಗಾಗಿ ಇದಕ್ಕೆ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಎಂದು ಹೆಸರು ಬಂದಿರಬೇಕು. ಬೆಟ್ಟದ ಮೇಲೆ ಜನರ ವಾಸವೇ ಇಲ್ಲ. ಕಾಡಾನೆಗಳು ದೇವಾಲಯದವರೆಗೂ ರಾತ್ರಿಯಲ್ಲಿ ಬರುತ್ತವೆ. ದೇವಾಲಯದ ಅರ್ಚಕರು ಪ್ರತಿದಿನವೂ ಕೆಳಗಿನ ಹಳ್ಳಿಯಿಂದ ಬಂದು ಹೋಗುತ್ತಾರೆ.

ಯುಗಾದಿಗೆ ಒಂದುವಾರ ಮುಂಚೆ ಬೆಟ್ಟದಲ್ಲಿ ರಥೋತ್ಸವ ನಡೆಯುತ್ತದೆ.

**ಯಳಂದೂರು ಗೌರೀಶ್ವರ :** ಹದಿನಾರು ರಾಜ ವಂಶದ ಮೊದಲ ದೊರೆ ಸಿಂಗಿದೀಪದೇವ ಭೂಪಾಲನು 1550ರಲ್ಲಿ ಯಳಂದೂರಿನಲ್ಲಿ ನಿರ್ಮಿಸಿದ ಗೌರೀಶ್ವರ ಶಿವ ದೇವಾಲಯವು ದ್ರಾವಿಡ ಶಿಲ್ಪ ಕಲೆಯ ದೃಷ್ಟಿಯಿಂದ ಬಹಳ ಅಪರೂಪದ ಕಟ್ಟಡವೆಂದು ಪ್ರಖ್ಯಾತವಾಗಿದೆ.

ಸಿಂಗಿದೀಪನ ಮೊಮ್ಮಗ ಮುದ್ದಭೂಪ 1665ರಲ್ಲಿ ಈ ದೇವಾಲಯಕ್ಕೆ ಭವ್ಯವಾದ ಮಹಾದ್ವಾರವನ್ನು ನಿರ್ಮಿಸಿ ಯಳಂದೂರಿನ ಕಲಾ ಕೀರ್ತಿಯನ್ನು ಅಜರಾಮರಗೊಳಿಸಿದನು.



## ಇಂಧನ, ಆಯವ್ಯಯ ಮುಖ್ಯಾಂಶಗಳು – 2019–2020

ನಮ್ಮ ಸರ್ಕಾರವು ರಾಜ್ಯದ ರೈತರ ಸರ್ವತೋಮುಖ ಏಳಿಗೆಗಾಗಿ ಹಲವಾರು ಹೊಸ ಕಾರ್ಯಕ್ರಮಗಳನ್ನು ರೂಪಿಸಿದೆ ಹಾಗೂ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳನ್ನು ಉತ್ತಮಪಡಿಸಿ ಮುಂದುವರೆಸುವ ಸದುದ್ದೇಶವನ್ನು ಹೊಂದಿರುತ್ತದೆ. ಈ ನಿಟ್ಟಿನಲ್ಲಿ ರಾಜ್ಯದ ರೈತರಿಗೆ ಉಚಿತವಾಗಿ ನೀಡಲಾಗುತ್ತಿದ್ದ ನೀರಾವರಿ ಪಂಪ್‌ಸೆಟ್, ಭಾಗ್ಯ ಜ್ಯೋತಿ, ಕುಟೀರಜ್ಯೋತಿ ಗ್ರಾಹಕರ ಸಹಾಯ ಧನವನ್ನು 2018–19ನೇ ಸಾಲಿನ 9,250 ಕೋಟಿ ರೂ.ಗಳಿಂದ 2019–20 ನೇ ಸಾಲಿನಲ್ಲಿ 11,250 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ಕರ್ನಾಟಕ ರಾಜ್ಯವು ನವೀಕರಿಸಬಹುದಾದ ಇಂಧನದ ಉತ್ಪಾದನೆಯಲ್ಲಿ ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ರಾಜ್ಯದ ಪ್ರಸ್ತುತ ಅಳವಡಿಸಿದ ಸಾಮರ್ಥ್ಯವು 12,747 ಮೆ.ವ್ಯಾ. ಆಗಿರುತ್ತದೆ. ಸೌರ ಶಕ್ತಿ ಉತ್ಪಾದನೆಯಲ್ಲಿಯೂ ಸಹ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಮುಂದಿನ ವರ್ಷದ ಅಂತ್ಯದಲ್ಲಿ ಇನ್ನು ಹೆಚ್ಚುವರಿಯಾಗಿ 2100 ಮೆ.ವ್ಯಾ.ಸಾಮರ್ಥ್ಯದ ಸೌರ ಶಕ್ತಿ ಉತ್ಪಾದನೆಯನ್ನು ಅಳವಡಿಸಲು ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ. ಈ ಹಿನ್ನಲೆಯಲ್ಲಿ, ಪ್ರಸಕ್ತ ಸಾಲಿನಲ್ಲಿ roof-top ಸೌರಶಕ್ತಿ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರವು ಹೆಚ್ಚು ಒತ್ತನ್ನು ನೀಡಲಿದೆ.

ಸೌರಶಕ್ತಿ ಉತ್ಪಾದನೆಯ ಹೆಚ್ಚಳದಿಂದಾಗಿ ಹಾಗೂ ರೈತರು ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸಲು ನೀರಾವರಿ ಪಂಪ್‌ಸೆಟ್‌ಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಹಗಲಿನಲ್ಲಿ ವಿದ್ಯುತ್ ಸರಬರಾಜನ್ನು ಒದಗಿಸಲು ನಮ್ಮ ಸರ್ಕಾರವು ನಿರ್ಧರಿಸಿದೆ.

ರೈತರಿಗೆ ದೊರಕುವ ವಿದ್ಯುಚ್ಛಕ್ತಿಯ ಗುಣಮಟ್ಟವನ್ನು ಉತ್ತಮಪಡಿಸಲು 40,000 ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗುವುದು.

# ವಿಶ್ವಕಾರ್ಮಿಕ ದಿನಾಚರಣೆ

ವಿಶ್ವಕಾರ್ಮಿಕ ದಿನಾಚರಣೆಯು ಪ್ರಾರಂಭವಾಗಿ 133 ವರ್ಷಗಳು ಕಳೆದು, (ಮೇ 1, 2019) 134ನೆಯ ಆಚರಣೆ ವಿಶ್ವದಾದ್ಯಂತ ನಡೆಯುತ್ತಿರುವ ಸಂಧಿಕಾಲದಲ್ಲಿ, ಈ ದಿನಾಚರಣೆಯ ಉಗಮ, ಇತಿಹಾಸ ಹಾಗೂ ಪ್ರಸ್ತುತತೆಗಳ ಒಂದು ವಿವೇಚನೆಯು ಔಚಿತ್ಯಪೂರ್ಣವಾಗುತ್ತದೆ. ಅಂತೆಯೇ ಈ ಕಿರುಲೇಖನದಲ್ಲಿ ಒಂದೆಡೆ "ವಿಶ್ವಕಾರ್ಮಿಕ ದಿನಾಚರಣೆ"ಯ ಇತಿಹಾಸದ ಇಣುಕು ನೋಟವನ್ನು ನೀಡುವುದರೊಡನೆ, ಇನ್ನೊಂದೆಡೆ, ಇದರ ಪ್ರಸ್ತುತ ಔಚಿತ್ಯದ ಪುನರಾವಲೋಕನವನ್ನು ಮಾಡಲಾಗಿದೆ.

**ಇತಿಹಾಸದ ಇಣುಕು ನೋಟ:**

ವೈಜ್ಞಾನಿಕ ಸಮಾಜವಾದದ ಪ್ರವರ್ತಕರಾದ ಕಾರ್ಲ್‌ಮಾರ್ಕ್ಸ್ ಹಾಗೂ ಫ್ರೆಡ್ರಿಕ್ ಎಂಗೆಲ್ಸ್ ಇವರು ಎಂಟು ಗಂಟೆಗಳ ಕೆಲಸದ ದಿನ ಜಾರಿಗೆ ಬರಬೇಕು ಎಂದು ತಮ್ಮ ಅನೇಕ ಬರವಣಿಗೆಗಳಲ್ಲಿ ಪ್ರತಿಪಾದಿಸಿದ್ದರು. ಜಿನೀವಾದಲ್ಲಿ ನಡೆದ ಮೊದಲನೆ ಇಂಟರ್‌ನ್ಯಾಷನಲ್ ಸಭೆಯಲ್ಲಿ 1866ರಲ್ಲೇ ಈ ಕುರಿತು ತೀರ್ಮಾನವನ್ನು ಕೈಗೊಳ್ಳಲಾಗಿತ್ತು ಕೂಡಾ. ಅಂತೆಯೇ 1866 ಆಗಸ್ಟ್‌ನಲ್ಲಿ ಅಮೇರಿಕೆಯ 60 ಸಂಘಟನೆಗಳಿಗೆ ಸೇರಿದ ಲಕ್ಷಾವಧಿ ಕಾರ್ಮಿಕರು ಕೂಡ ಈ ತೀರ್ಮಾನವನ್ನು ಕೈಗೊಂಡಿದ್ದರು. ಹೀಗಾಗಿ ಎಂಟು ಗಂಟೆಗಳ ದಿನದ



ಬೇಡಿಕೆ ವಿಶ್ವದ ಎಲ್ಲ ಕಾರ್ಮಿಕರ ಬೇಡಿಕೆಯಾಗಿ ಪರಿವರ್ತಿತಗೊಂಡಿತು. ಆದರೆ, ಈ ಬೇಡಿಕೆಯನ್ನು ಸಾಧಿಸಿಕೊಳ್ಳಲು ಅಮೇರಿಕೆಯ ಚಿಕಾಗೋ ನಗರದ ಹೇಮಾರ್ಕೆಟ್ ಸ್ಕ್ವಯರ್‌ನಲ್ಲಿ ನಡೆದ ಹೋರಾಟ ಜಾಗತಿಕ ಕಾರ್ಮಿಕ ಹೋರಾಟಗಳ ಇತಿಹಾಸದಲ್ಲಿ ಕೆಂಪು ಅಕ್ಷರ ದಿನವಾಗಿ ಪರಿಣಮಿಸಿತು.

1886 ಮೇ 1, ಕಾರ್ಮಿಕ ಹೋರಾಟಗಳ ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟ. ಆ ದಿನ ಅಮೇರಿಕೆಯಲ್ಲಿ ಸುಮಾರು ಐದು ಲಕ್ಷಜನ, ಎಂಟು ಗಂಟೆಯ ಕೆಲಸದ ದಿನಕ್ಕಾಗಿ ಪ್ರದರ್ಶನವನ್ನು ಹೂಡಿದ್ದರು. ಇವರಲ್ಲಿ ಸುಮಾರು ಎರಡು ಲಕ್ಷ ಜನ, ಎಂಟು ಗಂಟೆಯ ಕೆಲಸದ ದಿನಕ್ಕಾಗಿ ಪ್ರದರ್ಶನವನ್ನು ಹೂಡಿದ್ದರು. ಇವರಲ್ಲಿ ಸುಮಾರು ಎರಡು ಲಕ್ಷ ಜನ ಮುಷ್ಕರವನ್ನು ಹೂಡಿದ್ದರು. ಅಂದು ಚಿಕಾಗೋ ನಗರದಲ್ಲೇ 80 ಸಾವಿರ ಕಾರ್ಮಿಕರು ಮುಷ್ಕರವನ್ನು ಹೂಡಿದ್ದರು. ಈ ಚಳವಳಿಯನ್ನು ದಮನಗೊಳಿಸಲು ಪ್ರತ್ಯೇಕವಾಗಿ ಖಾಸಗಿ ಗೂಂಡಾ ಕಂಪನಿಗಳು ದೌರ್ಜನ್ಯವನ್ನು ನಡೆಸಿದ್ದವು.

**ಪ್ರಚಲಿತ ಪ್ರಸ್ತುತತೆ**

"ವಿಶ್ವದ ಕಾರ್ಮಿಕರೇ ಒಂದಾಗಿರಿ" ಇದು ವಿಶ್ವಕಾರ್ಮಿಕ ದಿನಾಚರಣೆಯ ಧ್ಯೇಯವಾಕ್ಯ. ಹಾಗಾದರೆ ಏತಕ್ಕಾಗಿ ವಿಶ್ವದ ಕಾರ್ಮಿಕರು ಒಂದಾಗಬೇಕು?"



ಎಂಬ ಪ್ರಶ್ನೆಗೆ ಉತ್ತರ "ವಿಶ್ವದಾದ್ಯಂತ ಸಮಾಜವಾದೀ ಸಮಾಜದ ಸ್ಥಾಪನೆಗೆ" ಎಂದು. 2008 ರಲ್ಲಿ ಅಮೇರಿಕೆಯಲ್ಲಿ ತೀವ್ರ ಆರ್ಥಿಕ ಮುಗ್ಗಟ್ಟು ಸಂಭವಿಸಿ, ಇದು ವಿಶ್ವದಾದ್ಯಂತ ಹಬ್ಬಿ, ಬಂಡವಾಳ ಶಾಹಿ ಹಾಗೂ ಸಾಮ್ರಾಜ್ಯ ಶಾಹಿ ವ್ಯವಸ್ಥೆಯು ಕುಸಿಯುತ್ತಿರುವುದಕ್ಕೆ ಸಾಕ್ಷ್ಯವನ್ನು ಒದಗಿಸಿದೆ. ಇದು ಸಮಾಜವಾದೀ ಸಾಮಾಜಿಕ ವ್ಯವಸ್ಥೆಯ ಸ್ಥಾಪನೆಗೆ ಯೋಗ್ಯಕಾಲವಾಗಿದ್ದು, ವಿಶ್ವದ ಕಾರ್ಮಿಕರು ಒಂದಾಗಿ ಈ ಕಾರ್ಯಕ್ಕೆ ಅಣಿಯಾಗಬೇಕಾಗಿದೆ. ಅಂತೆಯೇ ಭಾರತದಲ್ಲಿ ಸ್ವಾತಂತ್ರ್ಯ ನಂತರ 62 ವರುಷಗಳು ಕಳೆದರೂ ಪ್ರಜಾ ಸತ್ತೆಯ – ಸಮಾಜವಾದದ ಸಂವಿಧಾನದ ಮುಖವಾಡ ಧರಿಸಿ, ಬಂಡವಾಳ ಶಾಹಿ – ಸಾಮ್ರಾಜ್ಯಶಾಹಿ ಶೋಷಣಾಮಯ ವ್ಯವಸ್ಥೆಯನ್ನು, ಅಸಮಾನತೆ–ಅನ್ಯಾಯ–ಶೋಷಣೆಗಳನ್ನು ಶಾಶ್ವತಗೊಳಿಸುತ್ತಿರುವ ಭಾರತೀಯ ಆಳುವ ವರ್ಗಗಳ (ಬಂಡವಾಳ ಶಾಹಿ – ಭೂಮಾಲೀಕ ವರ್ಗಗಳ) ಆಳ್ವಿಕೆಯನ್ನು ಕೊನೆಗೊಳಿಸಲು, ಭಾರತದಲ್ಲಿಯ ಶೋಷಿತ ಕಾರ್ಮಿಕರು ಹಾಗೂ ಇತರ ಎಲ್ಲ ಶೋಷಿತ ವರ್ಗಗಳು ಒಂದಾಗಿ, ಈ ಶೋಷಕ ವರ್ಗದ ಅಮಾನುಷ ಆಡಳಿತಕ್ಕೆ ಅಂತ್ಯ ಹಾಡದಿದ್ದರೆ, ಸಂವಿಧಾನದಲ್ಲಿ ಘೋಷಿಸಲ್ಪಟ್ಟಿರುವ ಸಮಾಜವಾದವು ಕೇವಲ ಕಾಗದದ ಆಶ್ವಾಸನೆಯಾದೀತೇ ಹೊರತು, ಸಾಮಾಜಿಕ ವಾಸ್ತವಿಕತೆಯಾಗಲಾರದು. ಅಂತೆಯೇ ಈ ಮೇ ದಿನಾಚರಣೆಯ ಸಂದೇಶ, ಶೋಷಿತ ಕಾರ್ಮಿಕರು ಒಗ್ಗೂಡಿ, ವರ್ಗಹೋರಾಟಕ್ಕೆ ಮುಂದಾಗಿ, ಸಮಾಜವಾದಿ ಸಮಾಜ ಸ್ಥಾಪನೆಗೆ ಕಂಕಣಬದ್ಧರಾಗಬೇಕು ಎಂಬುದಾಗಿದೆ.



# ಸಾಧಕರು ಇವರು : ಸಂತ ಶ್ರೇಷ್ಠ ಸಿದ್ಧಗಂಗಾ ಶ್ರೀಗಳು



ತ್ರಿವಿಧ ದಾಸೋಹಿ, ಬಸವಣ್ಣನವರ ತತ್ವ 'ಕಾಯಕವೇ ಕೈಲಾಸ' ವನ್ನು ಅಕ್ಷರಶ: ಪಾಲಿಸಿದ ಸಿದ್ಧಗಂಗೆಯ ಮಠಾಧಿಪತಿಯಾಗಿದ್ದ ಶ್ರೀ ಶಿವಕುಮಾರ ಸ್ವಾಮೀಜಿಯವರು 'ನಡೆದಾಡುವ ದೇವರು' ಎಂದೇ ಹೆಸರಾಗಿದ್ದರು.

ತುಮಕೂರು ಜಿಲ್ಲೆಯ ಸಿದ್ಧಗಂಗಾಮಠ ದೇಶ-ವಿದೇಶಗಳಲ್ಲಿ ಪ್ರಖ್ಯಾತಿ ಹೊಂದಿದ್ದರೆ ಅದಕ್ಕೆ ಶಿವಕುಮಾರ ಸ್ವಾಮೀಜಿಯವರೇ ಪ್ರಮುಖ ಕಾರಣ.

ಲಕ್ಷಾಂತರ ಬಡಮಕ್ಕಳಿಗೆ ಶಿಕ್ಷಣ, ವಸತಿ ಮತ್ತು ಅನ್ನದಾಸೋಹದ ಮೂಲಕ ತ್ರಿವಿಧ ದಾಸೋಹಿಗಳೆಂದೇ ಜನಮಾನಸದಲ್ಲಿ ಪ್ರಸಿದ್ಧರಾಗಿದ್ದ ಅವರ ಶಿಷ್ಯವರ್ಗ ದೇಶ-ವಿದೇಶಗಳಲ್ಲಿ ಹರಡಿಕೊಂಡಿದ್ದಾರೆ.

ಶತಾಯುಷಿಗಳಾಗಿದ್ದ ಅವರು ತಮ್ಮ 111ನೇ ವಯಸ್ಸಿನಲ್ಲಿ ವಯೋಸಹಜ ಅನಾರೋಗ್ಯದಿಂದ ಜನವರಿ 21ರಂದು ನಿಧನರಾದಾಗ ಇಡೀ ನಾಡಿಗೆ ನಾಡೇ ಶೋಕ ಸಾಗರದಲ್ಲಿ ಮುಳುಗಿತ್ತು.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ವೀರಾಪುರದ ಹೊನ್ನೇಗೌಡ-ಗಂಗಮ್ಮ ದಂಪತಿಯ 13ನೇ ಮಗುವಾಗಿ 1908ರ ಏಪ್ರಿಲ್ 1ರಂದು ಜನಿಸಿದರು ಶಿವಣ್ಣ (ಶಿವಕುಮಾರ).

ಆ ಕಾಲದಲ್ಲಿ ಅಷ್ಟಾಗಿ ಶಾಲೆಗಳಿರಲಿಲ್ಲವಾದ್ದರಿಂದ ಕೂಲಿಮಠದಲ್ಲಿ ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡಿದ ಅವರು ಮುಂದೆ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿದ್ದು ಒಂದು ಸೋಜಿಗ ಎನ್ನಲೇಬೇಕು.

ಪ್ರಾಥಮಿಕ ಶಿಕ್ಷಣವನ್ನು ವೀರಾಪುರ ಪಕ್ಕದ ಪಾಲನಹಳ್ಳಿಯಲ್ಲಿ ನಡೆಸುತ್ತಿದ್ದಾಗ ತಾಯಿ ಗಂಗಮ್ಮನವರನ್ನು ಕಳೆದುಕೊಂಡರು. ನಂತರ ಶಿವಣ್ಣ ಅವರನ್ನು ಅವರ ಅಕ್ಕ ತಾಯಿ ಪ್ರೀತಿ ನೀಡಿ ಪೋಷಿಸಿದರು. ಅಕ್ಕನ ಆಸರೆಯಲ್ಲಿ ತುಮಕೂರು ಬಳಿಯ ನಾಗವಲ್ಲಿಯಲ್ಲಿ ಮಾಧ್ಯಮಿಕ ಶಿಕ್ಷಣ, ನಂತರ ತುಮಕೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಓದಿ 1926ರಲ್ಲಿ ಮೆಟ್ರಿಕ್ಯುಲೇಶನ್ ಪೂರೈಸುತ್ತಾರೆ. 1927ರಲ್ಲಿ ಸಿದ್ಧಗಂಗೆಯ ಮಠಾಧಿಪತಿಗಳಾಗಿದ್ದ ಶ್ರೀಉದ್ಧಾನ ಶಿವಯೋಗಿಗಳ ಕೃಪಾದೃಷ್ಟಿಗೆ ಬೀಳುತ್ತಾರೆ.

ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೆಂಗಳೂರು ಸೆಂಟ್ರಲ್ ಕಾಲೇಜು ಸೇರುತ್ತಾರೆ. ಗುಬ್ಬಿ ತೋಟದಪ್ಪ ಛತ್ರ ಅನ್ನ, ಆಸರೆ ನೀಡುತ್ತದೆ. ನಂತರ ಉದ್ಧಾನ ಸ್ವಾಮಿಗಳ ಪ್ರಭಾವಕ್ಕೆ ಒಳಗಾದ ಅವರಿಗೆ ಶಿಕ್ಷಣದ ಮಹತ್ವ ಎಂತಹದ್ದು ಎಂಬುದರ ಅರಿವಾಗುತ್ತದೆ.

ಶಿವಕುಮಾರರನ್ನು ಚೆನ್ನಾಗಿ ಅರಿತಿದ್ದ ಉದ್ಧಾನ ಶಿವಯೋಗಿಗಳು ಮಠದ ಉತ್ತರಾಧಿಕಾರಿಯನ್ನಾಗಿ ನೇಮಿಸುತ್ತಾರೆ. ಆಗ 22ರ ಹರೆಯದ ಶಿವಣ್ಣ 1930ರಲ್ಲಿ ಮಠದ ಜವಾಬ್ದಾರಿ ವಹಿಸಿಕೊಂಡು ಶಿವಕುಮಾರ ಸ್ವಾಮಿ ಆಗುತ್ತಾರೆ. ಆಗ ಮಠಕ್ಕೆ ಇದ್ದ ಆಸ್ತಿ ಎಂದರೆ ಮಳೆ ಆಧಾರಿತ ಜಮೀನು. ಅತಿವೃಷ್ಟಿ-ಅನಾವೃಷ್ಟಿಗಳ ಕಾಲ ಅದು ತುಮಕೂರು ಸೀಮೆಯಲ್ಲಿ ಬರಗಾಲವೇ ಹೆಚ್ಚು, ಮಠದ ಆದಾಯ ಕಡಿಮೆ.

ಭಕ್ತರ ಮನೆಗಳಿಗೆ ನಡೆದುಕೊಂಡು ಹೋಗಿ ಬಿನ್ನಹ ಮಾಡಿ ಕಾಳು-ಕಡ್ಡಿ ತಂದು ಕ್ರಮೇಣ ಶಾಲೆ, ಪ್ರಸಾದ ನಿಲಯದ ಸ್ಥಿತಿ ಸುಧಾರಿಸುತ್ತಾರೆ. ಶ್ರೀಗಳು ಯಾವುದೇ ಪವಾಡ ಮಾಡಲಿಲ್ಲ ವಿದ್ಯಾರ್ಥಿಗಳೊಂದಿಗೆ ಜೀವಿಸಿದರು, ಶಿಸ್ತು, ಪರಿಶ್ರಮ, ಧ್ಯಾನ, ಏಕಾಗ್ರತೆಯನ್ನು ಜೀವನದ ಉಸಿರಾಗಿಸಿಕೊಂಡರು, ನುಡಿದಂತೆ ನಡೆದರು. ವಿದ್ಯಾರ್ಥಿಗಳಿಗೂ ಅದನ್ನೇ ಬೋಧಿಸಿದರು. ಇತರರಿಗೂ ಅದು ದಾರಿ ದೀಪವಾಯಿತು.

ಬೆಳಗಿನ ಜಾವ ಶುರುವಾಗುತ್ತಿದ್ದ ಅವರ ದಿನಚರಿ ರಾತ್ರಿ 11ರ ವರೆಗೆ ನಿರಂತರವಾಗಿ ಸಾಗುತ್ತಿತ್ತು. ಅಗತ್ಯ ಬಿದ್ದರೆ ತಾವೇ ರಾಗಿಮುದ್ದೆ ತಿರುವುತ್ತಿದ್ದರು, ಅನ್ನ ಬಸಿಯುತ್ತಿದ್ದರು. ವಿದ್ಯಾರ್ಥಿಗಳಿಗೆ ಬೆಳಗಿನ ಹೊತ್ತು ಇಂಗ್ಲೀಷ್ ಮತ್ತು ಸಂಸ್ಕೃತ ಪಾಠ ಮಾಡುತ್ತಿದ್ದರು.

ಶ್ರೀಗಳ ಪಾಲಿಗೆ ಸಿದ್ಧಗಂಗೆ ಕಾಯಕದ ಒಂದು ಕ್ಷೇತ್ರ ಮಾತ್ರವಲ್ಲ ಅದೇ ಕೈಲಾಸ. ಅದೇ ಜಗತ್ತು. ವಿಶ್ವವೇ ತಮ್ಮತ್ತ ಗಮನ ಹರಿಸುವಂತಹ ಕೆಲಸವನ್ನು ಅಲ್ಲಿದ್ದೇ ಮಾಡಿದರು. ಸದಾ ಕಾಯಕಯೋಗಿಯಾಗಿ ದುಡಿದರು.

ಮಿತ ಆಹಾರ, ಶಿಸ್ತುಬದ್ಧ ಜೀವನ, ಅವರ ದೀರ್ಘಾಯುಷ್ಯದ ಗುಟ್ಟುಗಳಲ್ಲಿ ಒಂದಾಗಿರಬೇಕು. ಅವರು ಕನ್ನಡ, ಇಂಗ್ಲೀಷ್ ಸಾಹಿತ್ಯ, ವಚನಗಳನ್ನು ಚೆನ್ನಾಗಿ ಅಧ್ಯಯನ ಮಾಡಿದರು. ನಡೆದಾಡುವ ದೇವರಿಗೆ ಕಾಯಕದ ಜತೆಗೆ ಇಷ್ಟಲಿಂಗ ಪೂಜೆಯೇ ಉಸಿರಾಗಿತ್ತು. ಧಾರ್ಮಿಕ ಸಂಪ್ರದಾಯಗಳಿಗೆ ಕೊಂಚವೂ ಚ್ಯುತಿಯಾಗದಂತೆ ಹಲವು ದಶಕಗಳಿಂದಲೂ ನೆರವೇರಿಸಿಕೊಂಡು ಬಂದಿದ್ದರು.

ತಮ್ಮ ಶಿಷ್ಯ ಬಳಗದೊಂದಿಗೆ ತಾಸಿಗೂ ಹೆಚ್ಚಿನ ಅವಧಿ ಇಷ್ಟಲಿಂಗ ಪೂಜೆ ನೆರವೇರಿಸುತ್ತಿದ್ದ ಶ್ರೀಗಳು ತಾವೇ ದೀಪ-ಧೂಪ ಬೆಳಗುತ್ತಿದ್ದರು. ಧ್ಯಾನಾಸಕ್ತರಾಗಿ ಜಪ-ತಪ ಆಚರಿಸಿದ ಬಳಿಕ ತಮಗಾಗಿ ವಿಶೇಷವಾಗಿ ತಯಾರಿಸಿದ್ದ ಪ್ರಸಾದವನ್ನು ಸ್ವೀಕರಿಸುತ್ತಿದ್ದರು. ಇದರ ಜತೆಗೆ ಬೇವಿನ ಮರದ ಚಕ್ಕೆಯ ಕಷಾಯವೂ ಸಹ ಶ್ರೀಗಳ ದಿನನಿತ್ಯದ ಆಹಾರ ಪದ್ಧತಿಯಾಗಿತ್ತು. ಬಸವಣ್ಣ, ಸಿದ್ಧರಾಮ, ಅಲ್ಲಮ, ನಿಜಗುಣ ಶಿವಯೋಗಿ, ಸ್ವಾಮಿ ವಿವೇಕಾನಂದರನ್ನು ಆಗಾಗ ಉದ್ಧರಿಸುತ್ತಿದ್ದರಷ್ಟೇ ಅಲ್ಲ, ಅವರ ನಡೆನುಡಿ ತನಗೆ ಅನುಕರಣೀಯ ಎಂದು ಅನುಸರಿಸಿದರು. ಗಾಂಧೀಜಿಯವರ ಪ್ರಭಾವವೂ ಅವರ ಮೇಲೆ ಸಾಕಷ್ಟಿತ್ತು.

ಶ್ರೀಗಳ ಸೇವೆಯನ್ನು ಪರಿಗಣಿಸಿ, ಕರ್ನಾಟಕ ರತ್ನ, ಪದ್ಮಭೂಷಣ ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳು ಅವರಿಗೆ ಸಂದಿವೆ. ಕರ್ನಾಟಕ ವಿಶ್ವ ವಿದ್ಯಾನಿಲಯವು ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಲಕ್ಷಾಂತರ ಮಕ್ಕಳ ಮನಸ್ಸನ್ನು ಕಟ್ಟಿ ಅವರಲ್ಲಿ ಉತ್ತಮ ಸಂಸ್ಕಾರ ರೂಪಿಸಿ ಅವರಿಗಾಗಿ ತನ್ನ ಪರಿಸರ ಲೋಕ ಸುತ್ತಿ ಧಾನ್ಯ ಸಂಗ್ರಹಿಸಿ ತಂದು ಅವರನ್ನು ಉದ್ಧರಿಸಿದರು.

ಮಕ್ಕಳ ಬಾಳಲ್ಲಿ ಬೆಳಕು ಮೂಡಿಸಿದ ಶ್ರೀಗಳು ಎಂದೆಂದಿಗೂ ಪ್ರಾತ:ಸ್ಮರಣೀಯರು

### ಹುಟ್ಟುಹಬ್ಬದ ಶುಭಾಶಯಗಳು

**2019ನೇ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.**

**– ಸಂಪಾದಕೀಯ ಮಂಡಳಿ**



### ಹಾರ್ದಿಕ ಬೀಳ್ಕೊಡುಗೆ

**ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2019ನೇ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.**

**– ಸಂಪಾದಕೀಯ ಮಂಡಳಿ**

# ಸಾಧಕರು ಇವರು : ಸಾಲುಮರದ ತಿಮ್ಮಕ್ಕ

ತಿಮ್ಮಕ್ಕನ ಹೆಸರು ಕೇಳಿದರೆ ಹಲವರು ಅಚ್ಚರಿ ಪಡುತ್ತಾರೆ. ಏನಿದು ಸಾಲುಮರದ ತಿಮ್ಮಕ್ಕ, ಸಾಲುಮರಗಳಿಗೂ ಇವರಿಗೂ ಏನು ನಂಟು? ಇತ್ಯಾದಿ ಪ್ರಶ್ನೆಗಳು ಉದ್ಭವಿಸುತ್ತವೆ.



ಬಡ ಕುಟುಂಬದಲ್ಲಿ ಹುಟ್ಟಿದ ತಿಮ್ಮಕ್ಕ ತನಗೆ ಮಕ್ಕಳಿಲ್ಲದ ಕಾರಣ ರಸ್ತೆ ಬದಿ ಸಾಲು ಮರಗಳನ್ನು ನೆಟ್ಟು ಪೋಷಿಸಿ ಅವುಗಳನ್ನೇ ಮಕ್ಕಳೆಂದು ಭಾವಿಸಿ ಅಪ್ಪಿಕೊಂಡು ಪ್ರೀತಿ ತೋರಿದವರು. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಜನಿಸಿದ ತಿಮ್ಮಕ್ಕ ಅವರ ತಂದೆ ಚಿಕ್ಕರಂಗಯ್ಯ, ತಾಯಿ ವಿಜಯಮ್ಮ ಕಲ್ಲು ಕ್ವಾರಿಯಲ್ಲಿ ದಿನಗೂಲಿ ನೌಕರರು.

ಶಿಕ್ಷಣದ ಗಂಧ ಗಾಳಿ ಇಲ್ಲದ ಅವರು ಮಗಳು ತಿಮ್ಮಕ್ಕನನ್ನೂ ಶಾಲೆಗೆ ಕಳಿಸಲಿಲ್ಲ. ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದ ಚಿಕ್ಕಯ್ಯ ಎಂಬ ದನಕಾಯುವವನಿಗೆ ತಿಮ್ಮಕ್ಕನನ್ನು ಮದುವೆ ಮಾಡಿದರು.

ದಂಪತಿಗಳಿಬ್ಬರೂ ಮಕ್ಕಳಿಲ್ಲದೆ ಮಮ್ಮಲ ಮರುಗಿದರು. ಆ ದು:ಖವನ್ನು ಮರೆಯಲು ಉಪಾಯ ಒಂದನ್ನು ಕಂಡುಕೊಂಡರು; ತಿಮ್ಮಕ್ಕ ಅವರ ಹಳ್ಳಿಯಲ್ಲಿ ಆಲದ ಮರಗಳು ಹೇರಳವಾಗಿದ್ದವು. ಗಂಡ-ಹೆಂಡತಿ ಇಬ್ಬರೂ ಈ ಆಲದಮರಗಳ ಸಸಿಗಳನ್ನು ಕಸಿ ಮಾಡಲು ಆರಂಭಿಸಿದರು.

ಮೊದಲ ವರ್ಷದಲ್ಲಿ ಹತ್ತು ಸಸಿಗಳನ್ನು ಪಕ್ಕದ ಕುದೂರು ಹಳ್ಳಿಯ ಬಳಿ ನಾಲ್ಕು ಕಿ.ಮೀ ಉದ್ದಳತೆಯ ದೂರ ನೆಡಲಾಯಿತು. ಎರಡನೇ ವರ್ಷ ಹದಿನೈದು ಮತ್ತು ಮೂರನೇ ವರ್ಷ 20 ಸಸಿಗಳನ್ನು ನೆಟ್ಟರು.

ಸುಮಾರು ನಾಲ್ಕು ಕಿ.ಮೀ ದೂರದಿಂದ ಬಿಂದಿಗೆ ಹಾಗೂ ಕೊಳಗಗಳಲ್ಲಿ ನೀರನ್ನು ಸಾಗಿಸಿ ಸಸಿಗಳಿಗೆ ನೀರೆರೆದು ಪೋಷಿಸಿದರು. ಜಾನುವಾರು ಕಾಟದಿಂದ ಸಂರಕ್ಷಿಸಲು ಅವುಗಳ ಸುತ್ತ ಮುಳ್ಳು ಪೊದೆಗಳನ್ನು ಹೊದಿಸಿ ಕಾಪಾಡಿದರು. ಸಸಿಗಳ ಬೆಳವಣಿಗೆಯನ್ನು ಕಂಡ ಅವರು ನೀರಿನ ಅಗತ್ಯ ಹೆಚ್ಚಾಗಿ ಇದ್ದ ಕಾರಣ ಮುಂಗಾರು ಮಳೆ ಕಾಲದಲ್ಲಿಯೇ ನೆಡಲು ಶುರುಮಾಡಿದರು.

ಸಸಿಗಳು ಬೇರು ಬಿಟ್ಟು ಚೆನ್ನಾಗಿ ಬೆಳೆಯುತ್ತಿರುವುದನ್ನು ಕಂಡ ತಿಮ್ಮಕ್ಕ ದಂಪತಿ ತಮ್ಮ ಮಕ್ಕಳೇ ಈ ಸಸಿಗಳು ಎಂಬಂತೆ ಹೆಚ್ಚೆಚ್ಚು ಸಸಿಗಳನ್ನು ನೆಟ್ಟರು. ಹೀಗೆ ನೂರಾರು ಸಸಿಗಳು ರಸ್ತೆಯ ಇಕ್ಕೆಲಗಳಲ್ಲಿ ಕಂಗೊಳಿಸಿದ ಪರಿಣಾಮ ತಿಮ್ಮಕ್ಕ ಅವರಿಗೆ ಸಾಲುಮರದ ತಿಮ್ಮಕ್ಕ ಎಂಬ ಹೆಸರು ಪ್ರಾಪ್ತವಾಯಿತು.

ಈ ಮಧ್ಯೆ ಅವರ ಪತಿ ತೀರಿಕೊಂಡ ನಂತರವೂ ಅವರು ಈ ಕಾಯಕವನ್ನು ಮುಂದುವರಿಸಿದರು. ನಂತರ ಅವರ ಕಾಯಕದ ಮಹತ್ವ ಗಮನಿಸಿದ ಹಲವಾರು ಸಂಘ-ಸಂಸ್ಥೆಗಳು ತಿಮ್ಮಕ್ಕ ಅವರನ್ನು ಪರಿಸರವಾದಿ ಎಂದು ಬಿಂಬಿಸಲು ಸಾಧ್ಯವಾಯಿತು.

ಅದರ ಫಲವಾಗಿ ಅವರಿಗೆ ಹಲವಾರು ಪ್ರಶಸ್ತಿ-ಪುರಸ್ಕಾರಗಳು ಲಭಿಸಿವೆ.

1997ರಲ್ಲಿ "ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ" ಪ್ರಶಸ್ತಿ, ನಂತರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಹಿಳಾ ರತ್ನ, ಆರ್ಟ್ ಆಫ್ ಲಿವಿಂಗ್‌ನಿಂದ ವಿಶಾಲಾಕ್ಷಿ ಪ್ರಶಸ್ತಿ, 2010ರಲ್ಲಿ ಹಂಪಿ ವಿಶ್ವ ವಿದ್ಯಾಲಯದ "ನಾಡೋಜ" ಪ್ರಶಸ್ತಿಗಳು ದೊರೆತಿವೆ. ಎಲ್ಲ ಪ್ರಶಸ್ತಿಗಳಿಗೆ ಕಳಶಪ್ರಾಯವಾಗಿ 2019ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಅವರಿಗೆ "ಪದ್ಮಶ್ರೀ" ಪ್ರಶಸ್ತಿ ಲಭಿಸಿದೆ.

ಅನಕ್ಷರಸ್ಥೆಯಾದರೂ ಪರಿಸರದ ಮಹತ್ವ ಅರಿತು ಸಾಲುಮರಗಳನ್ನು ಬೆಳೆಸಿ ತನ್ನ ಮಕ್ಕಳಂತೆ ಅವುಗಳನ್ನು ಪೋಷಿಸಿದ ತಿಮ್ಮಕ್ಕ ನಮ್ಮ ಯುವ ಪೀಳಿಗೆಗೆ ಆದರ್ಶ ಹಾಗೂ ಅನುಕರಣೀಯ ಮಹಿಳೆಯಾಗಿದ್ದಾರೆ.

# ಮಂಕುತಿಮ್ಮನ ಕಗ್ಗ : ಪಡೆದುದನ್ನು ಪ್ರೀತಿಸುವ ಸುಖ

*ಸ್ವಾರಸ್ಯವಮಿತಮಾರಿಗುಮಿರದುಜೀವನದಿ।*

*ಪಾರದರ್ಕೆಯ ನೆನೆದು ನಡೆಯಲದು ಸಫಲ॥*

*ಸಾರಂಗಳ್ ಎಲ್ಲ ಪಣ್ಗಳವುಮ್ ಒಂದರೊಳಿರವು।*

*ಆರೋಗಿಸಿರುವುದನು-ಮಂಕುತಿಮ್ಮ॥*

ಸುಖವೆಂದರೆ ನಾವು ಬಯಸಿದುದನ್ನು ಪಡೆಯುವುದಲ್ಲ, ಪಡೆದುದನ್ನು ಪ್ರೀತಿಸುವುದು. ಯಾರ ಬದುಕಿನಲ್ಲೂ ಸುಖ ಮಾತ್ರವೇ ಇಲ್ಲ. ಯಾರೊಬ್ಬರೂ ಸ್ವಾರಸ್ಯಕರವಾಗಿ, ನಿಶ್ಚಿಂತೆಯಿಂದ ಬಾಳುತ್ತಿಲ್ಲ. ಎಲ್ಲರ ಹೃದಯದಲ್ಲೂ ಅರಿವಾಗದ ನೋವಿದೆ, ಬೇಸರವಿದೆ, ಅಳುವಿದೆ. ಕಷ್ಟಗಳಿಂದಲೇ ಅಲ್ಲವೇ ಸುಖದ ಪರಿಚಯವಾಗುವುದು. ನೋವುಂಡ ಮೇಲೆಯೇ ಅಲ್ಲವೇ ಮುಕ್ತವಾಗಿ ನಗುವುದಕ್ಕಾಗುವುದು.

ಜಗತ್ತಿದೆ ಜಗತ್ತೇ ಸುಖ-ಸಮೃದ್ಧಿಯಿಂದ ಇದೆ, ಎಲ್ಲರೂ ಸಂತೋಷದಿಂದ ಬಾಳುತ್ತಿದ್ದಾರೆ, ಸುಖವಾಗಿದ್ದಾರೆ ನಾನೊಬ್ಬನೇ ಅಸುಖಿಯಾಗಿದ್ದೇನೆ, ಕಷ್ಟಗಳು ನನ್ನನ್ನೇ ಹುಡುಕಿ ಬರುತ್ತಿದೆ ಎಂದೆಲ್ಲಾ ಕೊರಗುವುದು ನಮ್ಮ ರೀತಿ. ಅಸಹನೆಯ ಮುಖವನ್ನು ಹೊತ್ತೇ ಓಡಾಡುವುದೂ ಇದೆ. ಯಾವ ಕಷ್ಟವಾದರೂ, ಸುಖವಾದರೂ ನಾವದಕ್ಕೆ ಅರ್ಹರಲ್ಲದೆ ಬರುವುದಿಲ್ಲ. ಪರಿಸ್ಥಿತಿಯನ್ನು ನಾವು ಎದುರಿಸುವ, ಸ್ವೀಕರಿಸುವ ರೀತಿಯಲ್ಲಿ ಬದುಕಿನ ನೆಮ್ಮದಿ ಅಡಗಿದೆ. ಇನ್ನೊಬ್ಬರ ಬದುಕನ್ನು ವಿಮರ್ಶಿಸುವ, ಅವರ ಬದುಕಿನ ಭಾಗ್ಯಗಳ ಲೆಕ್ಕ ಇಡುವ ಮನಸ್ಥಿತಿ ಇರುವವರು ತಮ್ಮ ಬದುಕಿನ ಏಳಿಗೆಯನ್ನು ಮರೆತಿರುತ್ತಾರೆ. ತಮ್ಮ ಸಾಮರ್ಥ್ಯ, ಪ್ರತಿಭೆಯನ್ನು ನಿರ್ಲಕ್ಷಿಸಿ, ತಮ್ಮನ್ನು ತಾವೇ ನಂಬದಂತಿರುತ್ತಾರೆ. ಕೀಳರಿಮೆಯಿಂದ ಬಳಲುತ್ತಿರುತ್ತಾರೆ. ಜಗತ್ತಿನಲ್ಲಿರುವ ಯಾವ ವಸ್ತುವಾಗಲಿ, ಜೀವವಾಗಲಿ ವ್ಯರ್ಥವಲ್ಲ. ಪ್ರತಿಯೊಂದಕ್ಕೂ ಮೌಲ್ಯವಿದೆ. ಹಣ್ಣುಗಳ ರುಚಿ, ಬಣ್ಣ, ಗುಣಗಳು ವ್ಯತ್ಯಾಸವಾಗಿದ್ದರೂ ಯಾವ ಹಣ್ಣನ್ನು ಶ್ರೇಷ್ಠ, ಕನಿಷ್ಠ ಎಂದು ಪರಿಗಣಿಸಲಾಗುವುದಿಲ್ಲ. ಜೊತೆಗೆ ಪ್ರತಿ ಹಣ್ಣಿಗೂ ಒಂದಲ್ಲ ಒಂದು ಕೊರತೆಯೂ ಇದೆ. ಇದೇ ರೀತಿ ಎಷ್ಟೊಂದು ವಿಧದ ಹೂವುಗಳು ನಮ್ಮ ಸುತ್ತಲಿವೆ. ಎಲ್ಲವೂ ಒಂದಕ್ಕಿಂತ ಒಂದು ವಿಭಿನ್ನ ಮತ್ತು ಸುಂದರ. ಯಾವುದೋ ಒಂದು ರೂಪದಲ್ಲಿ ಅದು ಉಪಯುಕ್ತವಾಗಿರುತ್ತದೆ. ಅದರದ್ದೇ ಆದ ವಿಶೇಷತೆಯನ್ನು ಪಡೆದಿರುತ್ತದೆ. ಹಾಗೆಯೇ ಎಲ್ಲದಕ್ಕೂ ಒಂದು ಪರಿಮಿತಿ ಇದೆ. ಕೆಲವು ಹೂವುಗಳು ಹಲವು ದಿನಗಳವರೆಗೆ ಅರಳಿರಬಹುದು, ಕೆಲವು ಬಿಸಿಲು ಪ್ರಖರವಾಗುತ್ತಿರುವಂತೆಯೇ ಬಾಡಿ ಹೋಗಬಹುದು, ಕೆಲವು ಸಂಜೆ ಅರಳಿದರೆ, ಕೆಲವು ನಡುರಾತ್ರಿ ಪರಿಮಳ ಬೀರಬಹುದು. ಪ್ರತಿ ಹೂವಿನ ವರ್ಣ ಸಂಯೋಜನೆ, ಉಪಯೋಗ ಎಲ್ಲವೂ ವಿಭಿನ್ನ.

ಹೀಗೆಯೇ ಮನುಷ್ಯನ ಬದುಕು ಕೂಡಾ ಒಬ್ಬರ ಬದುಕಿನಂತೆ ಇನ್ನೊಬ್ಬರ ಬದುಕು ಇರುವುದಿಲ್ಲ. ಎಲ್ಲರಿಗೂ ಅವರದ್ದೇ ಆದ ಜೀವನಧರ್ಮವಿದೆ, ಇದೇ ರೀತಿ ಬಾಳಬೇಕೆಂಬ ಕನಸು-ಪರಿಕಲ್ಪನೆಯಿದೆ. ಅಷ್ಟೇ ಅಲ್ಲ, ನಾವು ಯಾರು ಪರಿಪೂರ್ಣರಲ್ಲ. ಎಲ್ಲರಿಗೂ ಒಂದಲ್ಲ ಒಂದು ದೌರ್ಬಲ್ಯ, ಕೊರತೆ ದುಗುಡವಿದ್ದೇ ಇದೆ. ಬಾಳಹಾದಿಯಲ್ಲಿ ಕಾರಿರುಳನ್ನು ಕಾಣದೇ ನಡೆವವರು ಯಾರು ಇಲ್ಲ. ಪ್ರತಿಯೊಬ್ಬರ ಅನುಭವ ಮತ್ತು ಅದರಿಂದ ಮೂಡುವ ಅರಿವು ನವನವೀನ.

ಬೇರೆಯವರ ಬದುಕನ್ನು ಓದಲು ತೊಡಗುವ ಬದಲು, ನಮ್ಮ ಜೀವನದ ಶ್ರೇಷ್ಠತೆಯನ್ನು ಶೋಧಿಸಬೇಕು. ಜೊತೆಗೆ ನಮ್ಮ ಇತಿ-ಮಿತಿಯ ಅರಿವು ಇರಬೇಕು. ದೇವರು ಆತನ ಯಾವುದೋ ಸದುದ್ದೇಶದ ಈಡೇರಿಕೆಗಾಗಿಯೇ ಮನುಷ್ಯರಾಗಿ ಹುಟ್ಟಿಸಿದ್ದಾನೆ. ನಮಗೆ ಸೂಕ್ತವಾದುದನ್ನು ಆತ ನೀಡುತ್ತಾ ಹೋಗುತ್ತಾನೆ. ಅರಿವನ್ನು ಪಡೆಯುತ್ತಾ, ಪ್ರತಿಯೊಂದು ಅನುಭವಗಳಲ್ಲೂ ಜೀವನ ರೂಪುಗೊಳ್ಳುವುದನ್ನು ಅರ್ಥೈಸಿಕೊಳುತ್ತಾ ಸಂತೃಪ್ತಿ ಹೊಂದುವುದೇ ನಿಜವಾದ ಸ್ವಾರಸ್ಯಪೂರ್ಣ ಜೀವನ.

# ಇವರು ನಮ್ಮ ಸಾಹಿತಿಗಳು



ಡಾ. ದೇ. ಜವರೇಗೌಡ

"ದೇಜಗೌ" ಎಂಬ ಹೆಸರಿನಿಂದಲೇ ಕನ್ನಡ ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಖ್ಯಾತರಾದವರು ದೇ. ಜವರೇಗೌಡ.

ಕನ್ನಡದ ಗದ್ಯ ಶಿಲ್ಪಿ ಎಂದೇ ಹೆಸರಾದ ದೇಜಗೌ 120ಕ್ಕೂ ಹೆಚ್ಚಿನ ಕೃತಿ ರಚನೆ ಮೂಲಕ ಕನ್ನಡ ಸಾರಸ್ವತ ಲೋಕವನ್ನು ಸಮೃದ್ಧಗೊಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆ ಎಂಬ ಹಳ್ಳಿಯಲ್ಲಿ 1948ರ ಜುಲೈ 6ರಂದು ಜನಿಸಿದರು. ತಂದೆ ದೇವೇಗೌಡ ಹಾಗೂ ತಾಯಿ ಚನ್ನಮ್ಮ. ಚಕ್ಕೆರೆ, ಚನ್ನಪಟ್ಟಣ ಹಾಗೂ ಬೆಂಗಳೂರುಗಳಲ್ಲಿ ಶಿಕ್ಷಣ ಪಡೆದ ಅವರು ಕನ್ನಡದಲ್ಲಿ ಬಿ.ಎ. ಆನರ್ಸ್ ಮತ್ತು ಮೈಸೂರಿನಲ್ಲಿ ಎಂ.ಎ. ಪದವಿ ಪಡೆದರು.

ಕುವೆಂಪು ಅವರ ಪಟ್ಟ ಶಿಷ್ಯರಾಗಿದ್ದ ಅವರಿಗೆ ಕವಿವಾಣಿ "ಕನ್ನಡಕ್ಕಾಗಿ ನಿನ್ನ ಕೈ ಎತ್ತು ಕೈ ಕಲ್ಪವೃಕ್ಷ ಆಗುತ್ತದೆ. ಕನ್ನಡಕ್ಕಾಗಿ ಕೊರೆಳೆತ್ತು ಅಲ್ಲಿ ಪಾಂಚಜನ್ಯ ಮೊಳಗುತ್ತದೆ" ಎಂಬುದು ದೇಜಗೌ ಅವರ ಸ್ಫೂರ್ತಿಯ ಸೆಲೆಯಾಯಿತು.

ಕೆಲ ಕಾಲ ಶಿಕ್ಷಣ ಇಲಾಖೆ ಹಾಗೂ ಸಚಿವಾಲಯದಲ್ಲಿ ಗುಮಾಸ್ತರಾಗಿದ್ದರು. ನಂತರ 1946ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನೌಕರಿ ಪಡೆದರು. ಒಂದೆರಡು ವರ್ಷಗಳಲ್ಲಿಯೇ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ಬಂದರು. ಆಗ ಅಲ್ಲಿ ನಡೆಸುತ್ತಿದ್ದ ಸಾಹಿತ್ಯ ಹಾಗೂ ಸಂಸ್ಕೃತಿಯ ವಿಚಾರಗಳಿಗೆ ಮೀಸಲಾಗಿದ್ದ "ಪ್ರಬುದ್ಧ ಕರ್ನಾಟಕ" ಎಂಬ ಮಾಸ ಪತ್ರಿಕೆಗೆ ಸಂಪಾದಕರಾದರು. 1960ರಲ್ಲಿ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿಗೆ ಪ್ರಿನ್ಸಿಪಾಲರಾಗಿ, 1964ರ ವೇಳೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಅಲ್ಲಿನ ಮುಖ್ಯಸ್ಥರಾದರು. 1965ರ ವೇಳೆಗೆ "ಕನ್ನಡ ಅಧ್ಯಯನ ಸಂಸ್ಥೆ" ಆರಂಭಕ್ಕೆ ಕಾರಣರಾದವರಲ್ಲಿ ಇವರು ಪ್ರಮುಖರೆನಿಸಿದರು.

1969ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾದರು. 1970ರಲ್ಲಿ ಬೆಂಗಳೂರಿನಲ್ಲಿ ನಡೆದ 47ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಗೌರವಕ್ಕೆ ಪಾತ್ರರಾದರು. ಅವರು ರಚಿಸಿದ "ಪುನರುತ್ಥಾನ" ಕೃತಿಗೆ ಸೋವಿಯತ್ ಲ್ಯಾಂಡ್ ಪ್ರಶಸ್ತಿ ಬಂದಿದೆ.

ತಿರುವಾಂಕೂರಿನ ದ್ರಾವಿಡ ಬ್ರಹ್ಮ ವಿಜ್ಞಾನ ಸಂಸ್ಥೆ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಅಪೂರ್ವ ಜಾನಪದ ವಸ್ತು ಸಂಗ್ರಹಾಲಯ ಸ್ಥಾಪನೆ, ಕನ್ನಡ ವಿಶ್ವಕೋಶ ಹಾಗೂ ವಿಷಯ ವಸ್ತು ಕೋಶಗಳು ಇವರ ಕಾಲದಲ್ಲಿ ಹೊರಬಂದವು. ಹೋರಾಟದ ಬದುಕು ಆತ್ಮಕಥೆ, ಜೀವನ ಚರಿತ್ರೆಗಳು, ಪ್ರವಾಸ ಸಾಹಿತ್ಯ, ಕುವೆಂಪು ಅವರನ್ನು ಕುರಿತು ಬರೆದ ಕೆಲವು ಕೃತಿಗಳು, ಅನುವಾದಿತ ಬರಹಗಳು, ಬಸವೇಶ್ವರ, ಡಾ.ಬಿ.ಆರ್. ಅಂಬೇಡ್ಕರ್, ಕಾರ್ಲ್ ಮಾರ್ಕ್ಸ್‌ರನ್ನು ಕುರಿತು ತೌಲನಿಕ ಉದ್ಗ್ರಂಥಗಳು ಅವರ ಲೇಖನಿಯಿಂದ ಹೊರಬಂದಿವೆ.

ದೇಜಗೌ ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಅಪಾರ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಚಿದಾನಂದ ಪ್ರಶಸ್ತಿ, ಜೀಶಂಪ ಜಾನಪದ ಪ್ರಶಸ್ತಿ, 1998ರಲ್ಲಿ ಪಂಪ ಪ್ರಶಸ್ತಿ ಸೇರಿದಂತೆ ಹತ್ತಾರು ಪ್ರಶಸ್ತಿಗಳ ಗರಿ ಅವರ ಮುಡಿಗೇರಿವೆ.

ತಮ್ಮ ಮೆಚ್ಚಿನ ಗುರು ಕುವೆಂಪು ಅವರ ದಾರಿಯಲ್ಲಿ ನಡೆದ ಜವರೇಗೌಡರು ಕನ್ನಡ ಭಾಷೆ, ಸಾಹಿತ್ಯಕ್ಕೆ ಬಹುಮುಖ ಸೇವೆ ಸಲ್ಲಿಸಿದ್ದಾರೆ.

2016ನೇ ಮೇ30 ರಂದು ಅವರು ನಿಧನರಾದರು.

---


ಭಾಷಾವಿಜ್ಞಾನ, ಛಂದಸ್ಸು, ವ್ಯಾಕರಣ ಕ್ಷೇತ್ರದಲ್ಲಿ ಆಳವಾದ ಪಾಂಡಿತ್ಯವನ್ನು ಹೊಂದಿದ್ದ ಕನ್ನಡದ ವಿದ್ವಾಂಸರಲ್ಲಿ ಸೇಡಿಯಾಪು ಕೃಷ್ಣಭಟ್ಟ ಪ್ರಮುಖರು.

ಕವಿ, ಕತೆಗಾರ, ಸಹೃದಯ ವಿಮರ್ಶಕರೂ ಆಗಿದ್ದ ಕೃಷ್ಣಭಟ್ಟ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನವರು.

1902ರ ಜೂನ್ 8 ರಂದು ಪುತ್ತೂರು ತಾಲ್ಲೂಕಿನ ಸೇಡಿಯಾಪುವಿನಲ್ಲಿ ಜನಿಸಿದರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ನಂತರ ಕಾಲೇಜು ಶಿಕ್ಷಣವನ್ನು ಮುಗಿಸಿ ಮಂಗಳೂರಿನ ಸೆಂಟ್ ಅಲೋಷಿಯಸ್ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇರಿ ನಂತರ ಅದೇ ಸಂಸ್ಥೆಯ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಕನ್ನಡದ ಉದ್ದಾಮ ಪಂಡಿತರಾಗಿದ್ದ ಅವರು ಬರೆದದ್ದು ಸ್ವಲ್ಪವಾದರೂ ಅವೆಲ್ಲವೂ ಮೌಲಿಕ ಹಾಗೂ ಪ್ರೌಢವಾದವುಗಳೆಂಬ ಹೆಸರನ್ನು ಪಡೆದವರು.

'ಚಂದ್ರಖಂಡ' ಮತ್ತು 'ಸಣ್ಣ ಕಾವ್ಯಗಳು' ಎಂಬ ಕವಿತೆಗಳ ಸಂಕಲನ, 'ಪಳಮೆಗಳು'-ಕಥಾ ಸಂಕಲನ. ಕನ್ನಡದಲ್ಲಿ. ಛಂದಸ್ಸು, ಛಂದೋಗತಿ-ಛಂದಸ್ಸತ್ವ ಹಾಗೂ ಗತಿಭೇದಗಳ ವಿವೇಚನೆಯುಳ್ಳ ಮೌಲಿಕ ಗ್ರಂಥಗಳು. ಕೆಲವು ದೇಶ ನಾಮಗಳು-ಶಬ್ದಾರ್ಥ ಸಂಶೋಧನಾ ಗ್ರಂಥ, ಅವರ "ತಥ್ಯ ದರ್ಶನ" ಗ್ರಂಥ ಇಂಗ್ಲಿಷ್‌ಗೆ ಅನುವಾದವಾಗಿದೆ. 'ವಿಚಾರ ಪ್ರಪಂಚ' - ಸಾಹಿತ್ಯ, ಭಾಷೆ, ಕಲೆ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ವೈಚಾರಿಕ ಗ್ರಂಥ. ಈ ಕೃತಿಗೆ 1994ನೇ ಸಾಲಿನ ಪ್ರತಿಷ್ಠಿತ ಪಂಪ ಪ್ರಶಸ್ತಿ ಲಭಿಸಿದೆ.



ಸೇಡಿಯಾಪು ಕೃಷ್ಣಭಟ್ಟ

'ಪಳಮೆಗಳು' ಕೃತಿಗೆ ಮದ್ರಾಸ್ ಸರ್ಕಾರದ ಶಿಕ್ಷಣ ಇಲಾಖೆ ಪ್ರಶಸ್ತಿ, 'ಚಂದ್ರಖಂಡ', 'ಛಂದೋಗತಿ' ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

1994ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ, ಚಿದಾನಂದ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ಸೇಡಿಯಾಪು ಅವರಿಗೆ ಸಂದಿವೆ.

ಅವರು ಬರೆದ ಪತ್ರಗಳ ಸಂಗ್ರಹ ಹಾಗೂ ಅವರ ವ್ಯಕ್ತಿ ಚಿತ್ರಣವನ್ನು ಕಾರ್ಕಳದ ಎಂ. ರಾಮಚಂದ್ರ ಎಂಬುವರು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ.

ಡಾ. ಶಿವರಾಮ ಕಾರಂತರಿಗೆ ಹೆಚ್ಚು ಆಪ್ತರಾಗಿದ್ದ ಸೇಡಿಯಾಪು ಕೃಷ್ಣಭಟ್ಟ ಅವರು 1995ರಲ್ಲಿ ನಿಧನರಾದರು.



## ಸ್ತ್ರೀ

ಹರಿವ ನೀರು ನಾನಾಗಿದ್ದರೆ,
ನನ್ನಾಸೆಗಳ ಬಣ್ಣಗಳ ಬೆರೆಸಿಡುವೆ.
ಸುಳಿವ ಗಾಳಿ ನಾನಾಗಿದ್ದರೆ,
ನನ್ನೊಳಗಿನ ಭಾವನೆಗಳ ರಾಗವ ತೇಲಿಬಿಡುವೆ.

ಮುಸುಕುವ ಮಂಜು ನಾನಾಗಿದ್ದರೆ,
ನನ್ನೊಳ ನಾಚಿಕೆಯ ಹಿಮವ ಪಸರಿಸುವೆ.
ಬೆಳಗುವ ಸೂರ್ಯಕಿರಣ ನಾನಾಗಿದ್ದರೆ,
ನನ್ನ ಆತ್ಮವಿಶ್ವಾಸದ ಬೆಳಕ ಹರಡಿಬಿಡುವೆ.

ಜೀವಗಳ ಹೊರುವ ಭುವಿಯು ನಾನಾಗಿದ್ದರೆ,
ಎಲ್ಲಾ ಜೀವಿಗಳು ಒಂದೇ ಎಂಬ ಅರಿವ ನೀಡುವೆ.

ಪಂಚಭೂತಗಳ ತತ್ವವೆನಗೆ,
ಎನ್ನೊಳಗಿನ ಭಾವಗಳ ಶಕ್ತಿಯೊಳಗೆ.
ನನ್ನವರ ಆಶಯವೇ ಶ್ರೇಯವೆನಗೆ
ನಾನು ಧರಣಿಯು, ನಾನು ಧಮನಿಯು,
ನಾನು ಎಲ್ಲರಲ್ಲೊಬ್ಬಳಾಗಿ ಬೆಳವ ಸ್ತ್ರೀ.

## ಬದುಕು ನಮ್ಮದು

ಹುಸಿಗನಸಿನ ಆಸೆಯಲಿ ಮನವ ನೇವರಿಸುತ,
ದಿಕ್ಕೆಂದು ತೋರಿದ ದಾರಿಯ ಎಣಿಸುತ.
ಮತಿಯಿಲ್ಲದೆ, ಬಂದುದೇ ಬದುಕೆನಿತು,
ಕವಿದ ಕತ್ತಲೆಯೇ ನನ್ನದೆನಿಸಿಕೊಂಡ ಮೂರ್ಖತನವೆ ಬದುಕು?

ಕಣ್ ತೆರೆದು ನೋಡಿದರೆ ಬೆಳಕು ತುಂಬುವುದು,
ಮತಿಯಿಟ್ಟು ಚಿಂತಿಸೆ ಹೊಸ ದಿಗಂತ ಕಾಣುವುದು.
ತೆರೆದ ಆಗಸವಿಹುದು ರೆಕ್ಕೆ ಬಿಚ್ಚಿ ಹಾರಲು,
ಒಳ ಮನಸ ದನಿಗೆ ಹೊಸ ತನವು ಮಿಡಿವುದು.

ನೆನ್ನೆಯೆಂಬುದು ಕಾಣದೆ ಕಾಡುವ ನೆನಪು,
ನಾಳೆಯೊಂದೆ ಮುಂದಾಗುವ ಸೊಬಗು.
ಛಲವೊಂದು ಹುದುಗಿದ್ದರೆ ಎದೆಯೊಳಗೆ,
ಹಿಡಿದು ಕುಗ್ಗಿಸುವವರ್‍ಯಾರು ನಮಗೆ.

ನಮ್ಮೊಳಗಿನ ನಿರಂತರ ಹೋರಾಟ,
ಗೆದ್ದು ಮುನ್ನುಗ್ಗುತ್ತಿರೆ ಹೊಸ ಪಾಠ.
ಕಾಡುವ ಹಳೆನೋವು ಜರಿದರು,
ಹೊಂಗನಸ ಮುನ್ನೀರ ದಾಟಿ ಬೆಳೆವ ಬದುಕು ನಮದಲ್ಲವೇ!

**ಕವಿತಾ.ಕೆ**
ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)
ಜಯನಗರ ವಿಭಾಗ, ಬೆ.ವಿ.ಕಂ.

# ಆರೋಗ್ಯವೇ ಭಾಗ್ಯ – ಕೊತ್ತಂಬರಿ ಸೊಪ್ಪು



ದಿನ ನಿತ್ಯವೂ ಅಡಿಗೆಯಲ್ಲಿ ಉಪಯೋಗಿಸಲ್ಪಡುವ ಈ ಸೊಪ್ಪು ವಿಶೇಷ ಔಷಧೀಯ ಗುಣಗಳನ್ನು ಹೊಂದಿದೆ.

ಕೊತ್ತಂಬರಿಯನ್ನು ಧನಿಯ ಎಂದೂ ಕರೆಯುತ್ತಾರೆ. ಇದರ ಬೀಜಗಳೂ ಅಷ್ಟೆ ತಂಪು, ಮನಸ್ಸಿಗೆ ಹಿತಕಾರಿ, ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಈ ಸೊಪ್ಪು ತನ್ನದೇ ಆದ ವಿಶಿಷ್ಟ ಪರಿಮಳವನ್ನು ಹೊಂದಿದೆ. ಆಹಾರದಲ್ಲಿ ರುಚಿಯನ್ನು ಹೆಚ್ಚಿಸುತ್ತದೆ.

ಇದರಲ್ಲಿ ಎ. ಬಿ. ಮತ್ತು ಸಿ ಜೀವ ಸತ್ವಗಳಿವೆ ಮತ್ತು ಕಬ್ಬಿಣದ ಅಂಶವೂ ಇರುವುದರಿಂದ ರಕ್ತ ದೋಷಗಳನ್ನೂ ನಿವಾರಣೆ ಮಾಡುತ್ತದೆ.

ಬಾಯಾರಿಕೆ, ದಾಹ ನಿವಾರಣೆ ಮತ್ತು ಪಿತ್ತ ಶಮನಕ್ಕಾಗಿ : ಕೊತ್ತಂಬರಿ ಬೀಜ 10 ಗ್ರಾಂನಷ್ಟು ರಾತ್ರಿ ನೀರಿನಲ್ಲಿ ನೆನೆಸಿಡಬೇಕು. ಬೆಳಿಗ್ಗೆ ರುಬ್ಬಿ ಇಲ್ಲವೆ ಕಿವುಚಿ ರಸ ತೆಗೆದುಕೊಳ್ಳಬೇಕು. ಇದನ್ನು ಸೋಸಿಕೊಂಡು ಎರಡು ಚಮಚ ಸಕ್ಕರೆ ಹಾಕಿ ಬೆಳಿಗ್ಗೆಯೇ ಕುಡಿಯಬೇಕು. ಬಾಯಾರಿಕೆ ಪಿತ್ತ ವಿಕಾರಗಳು ನಿವಾರಣೆಯಾಗುವುದು.

ಕೊತ್ತಂಬರಿ ಬೀಜಗಳನ್ನು ಪುಡಿಮಾಡಿ ನೀರಿಗೆ ಹಾಕಿ ಕುದಿಸಿ ಕಷಾಯ ಮಾಡಿ ಕುಡಿದರೆ ನರಗಳ ದೌರ್ಬಲ್ಯ, ತಲೆ ಸುತ್ತುವಿಕೆ, ಹುಳಿತೇಗುಗಳಿಗೆ ಸೂಕ್ತ ಪರಿಹಾರ ದೊರೆಯುತ್ತದೆ.

ಬಾಯಿ ದುರ್ಗಂಧ ಮತ್ತು ದಂತ ಕ್ಷಯ ನಿವಾರಣೆಗೆ: ಕೊತ್ತಂಬರಿ ಸೊಪ್ಪನ್ನು ಬಾಯಲ್ಲಿ ಚೆನ್ನಾಗಿ ಅಗಿದು ವಸಡು, ಹಲ್ಲುಗಳಿಗೆ ಬೆರಳಿನಿಂದ ತಿಕ್ಕಿಕೊಳ್ಳಬೇಕು. ಇದರಿಂದ ಬಾಯಿ ದುರ್ಗಂಧ ಮತ್ತು ದಂತ ಕ್ಷಯ ನಿವಾರಣೆಯಾಗುವುದು.

ಒಂದು ಚಮಚ ಕೊತ್ತಂಬರಿ ಸೊಪ್ಪಿನ ರಸಕ್ಕೆ ಒಂದು ಚಮಚ ಜೇನು ಸೇರಿಸಿ ರಾತ್ರಿ ಮಲಗುವುದಕ್ಕಿಂತ ಮುಂಚೆ ಕುಡಿಯಬೇಕು. ಇದರಿಂದ ಜೀರ್ಣಶಕ್ತಿ ಹೆಚ್ಚಿ ಜಠರ ದೋಷಗಳು ನಿವಾರಣೆಯಾಗುವುದು.

# ಕ್ಯಾರೆಟ್ (ಗಜ್ಜರಿ)

ಗಜ್ಜರಿಯು ರುಚಿಯಲ್ಲಿ ಸಿಹಿ, ಖಾರ, ಘಾಟು ಉಳ್ಳದ್ದಾಗಿದೆ. ಇದರಲ್ಲಿ ಜೀವ ಸತ್ವಗಳೂ ಮತ್ತು ಲೋಹಾಂಶಗಳು ಅಧಿಕವಾಗಿವೆ. ರಕ್ತವನ್ನು ಶುದ್ಧಿಗೊಳಿಸುವುದು. ಇಡೀ ದೇಹಕ್ಕೆ ಪುಷ್ಟಿಯನ್ನು ಉಂಟು ಮಾಡುತ್ತದೆ. ದೊಡ್ಡವರಿಗೂ ಮಕ್ಕಳಿಗೂ ಆರೋಗ್ಯವನ್ನುಂಟು ಮಾಡುವ ಹಿತಕರವಾದ ಗುಣವನ್ನು ಹೊಂದಿದೆ.

**ಅಜೀರ್ಣ ನಿವಾರಣೆ, ಪಚನ ಶಕ್ತಿ ಹೆಚ್ಚಲು:** ಅಜೀರ್ಣದ ತೊಂದರೆಗಳಿಗೆ ಗಜ್ಜರಿಯನ್ನು ಹಸಿಯಾಗಿಯೇ ಅಗಿದು ತಿನ್ನಬೇಕು. ಇದರಿಂದ ಜಠರ ದೋಷಗಳು ನಿವಾರಣೆಯಾಗಿ ಪಚನ ಶಕ್ತಿ ಹೆಚ್ಚುವುದು.

**ಮಲಬದ್ಧತೆ ನಿವಾರಣೆಗೆ:** ಗಜ್ಜರಿ ರಸ 2 ಚಮಚ, ಬಸಳೆ ಸೊಪ್ಪಿನ ರಸ 2 ಚಮಚ ನಿಂಬೆ ಹಣ್ಣು ಅರ್ಧ ಹೋಳುರಸ ಬೆರೆಸಿ ಕುಡಿದರೆ ಜಠರ ಶುದ್ಧಿಯಾಗುವುದು. ಮಲಬದ್ಧತೆ ನಿವಾರಣೆಯಾಗುವುದು.



**ರೋಗ ನಿರೋಧಕ ಮತ್ತು ಶಕ್ತಿಗೆ:** ಗಜ್ಜರಿಯ ಕೋಸಂಬರಿ ಮತ್ತು ಸಲಾಡ್ ಸೇವನೆಯಿಂದ ದೇಹಕ್ಕೆ ಆರೋಗ್ಯವೂ, ಚೈತನ್ಯವೂ ಉಂಟಾಗುವುದು. ಗಜ್ಜರಿಯನ್ನು ತುರಿದು ಅದಕ್ಕೆ ಒಂದೆರಡು ಚಮಚ ಜೇನು, ಅರ್ಧಹೋಳು ನಿಂಬೆರಸ ಮಿಶ್ರಮಾಡಿ ತಿನ್ನುತ್ತಿದ್ದರೆ ನರಮಂಡಲ, ಶ್ವಾಸಕೋಶ, ಮೂತ್ರ ಪಿಂಡಗಳಿಗೆ ಶಕ್ತಿ ಬರುವುದು. ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.

**"ಬೆಸ್ಕಾಂ ಗ್ರಾಹಕರ ಜಾಗೃತಿ ಅರಿವು ಸಮ್ಮೇಳನ – 2019" ಸಮಾರಂಭವನ್ನು ಬೆಂಗಳೂರಿನ ಕಾನ್‌ರಾಡ್ ಹೋಟೆಲ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಸಮ್ಮುಖದಲ್ಲಿ ದಿನಾಂಕ 05.02.2019 ರಂದು ನೆರವೇರಿಸಲಾಯಿತು.**





















## ಸಂಪಾದಕ ಮಂಡಳಿ

| | |
|---|---|
| **ಶ್ರೀಮತಿ ಸಿ. ಶಿಖಾ,** ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ಡಾ. ಆರ್. ಸಿ. ಚೇತನ್,** ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಅಶೋಕ್ ಕುಮಾರ್. ಜಿ,** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ಹೆಚ್. ಎಂ. ಶಿವಪ್ರಕಾಶ್,** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | ಸಂಪಾದಕರು |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ಎನ್. ಪ್ರಕಾಶ್ ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಎಚ್. ಆರ್. ರಾಜಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪ.ಜಾ.ತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಎಸ್ಕಾಂಗಳ ಪ.ಜಾ.ತಿ. ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಕುಮಾರ್ ಮುದ್ದಣ್ಣನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ


ವಿಳಾಸ: **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.),ನಿಗಮ ಕಾರ್ಯಾಲಯ, ಬಿ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **gmcr@bescom.co.in**


**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**


Printed at : Poornima Printers, Ph. 080 - 23359588